### ಮಲೆನಾಡು, ಕರಾವಳಿ, ಬಯಲು ಸೀಮೆಯಲ್ಲಿ ಭರ್ಜರಿ ವರ್ಷಧಾರೆ

# ಮಳೆಗೆ ಕೊಚ್ಚಿಹೋದ ರಸ್ತೆ

■ **ವಿಕ ಸುದ್ದಿಲೋಕ** ಶಿವಮೊಗ್ಗ

ಜಿಲ್ಲಾದ್ಯಂತ ಗುರುವಾರ ಸಂಜೆ ಮತ್ತು ರಾತ್ರಿ ಸುರಿದ ಜೋರು ಮಳೆಯು ಇಳೆಯನ್ನು ಹದಗೊಳಿಸಿದೆ. ನೀರಿಲ್ಲದೆ ಸಾಯುವ ಹಂತದಲ್ಲಿದ್ದ ತೋಟದ ಬೆಳೆಗಳಿಗೆ ಮರುಜೀವ ಬಂದಂತಾಗಿದೆ. ಜಿಲ್ಲೆಯಲ್ಲಿ ಸರಾಸರಿ 11.9 ಮಿ.ಮೀ. ಮಳೆಯಾಗಿದೆ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮರ ಬಿದ್ದು ಸಂಚಾರ ಅಸ್ತವ್ಯಸ್ತವಾಗಿದೆ.

### ಕರಾವಳಿಯಲ್ಲಿ ಸಾಧಾರಣ ಮಳೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶುಕ್ರವಾರ ಕೂಡ ಸಾಧಾರಣ ಮಳೆ ಮುಂದುವರಿದಿದೆ. ಗ್ರಾಮಾಂತರ ಭಾಗದಲ್ಲಿ ಹೆಚ್ಚು ಮಳೆಯಾದರೆ, ನಗರ ಭಾಗದಲ್ಲಿ ತುಂತುರು ಮಳೆ ಜಿನುಗಿದೆ. ಸುಳ್ಯ, ಸುಬ್ರಹ್ಮಣ್ಯ ಭಾಗದಲ್ಲಿ ಉತ್ತಮ ಮಳೆಯಾಗಿದೆ. ಸುಳ್ಯದ ಅರಂತೋಡು ಗ್ರಾಮದ ಕೊಡಂಕೇರಿ ಎಂಬಲ್ಲಿ ಮಹಮ್ಮದ್ ಎಂಬವರ ಮನೆಯ ಮೇಲೆ ಶುಕ್ರವಾರ ಮರ ಬಿದ್ದು ಹಾನಿಯಾಗಿದೆ. ಮಳೆಗೆ ಮನೆಯ ಕಂಪೌಂಡ್ ಕುಸಿದು ಹಾನಿ ಸಂಭವಿಸಿದ ಘಟನೆ ಸಂಪಾಜೆ ಗ್ರಾಮದ ಗೂನಡ್ಕದ ದರ್ಖಾಸ್ತುವಿನಲ್ಲಿ ಗುರುವಾರ ನಡೆದಿದೆ.

### ಹೊಳೆಯಲ್ಲಿ ಮುಳುಗಿ ಇಬ್ಬರು ಸಾವು

**ಭಟ್ಕಳ (ಉತ್ತರ ಕನ್ನಡ):** ಇಲ್ಲಿನ ಕಡವಿನಕಟ್ಟೆ ರೈಲು ಹಳಿಯ ಸಮೀಪದ ಹೊಳೆಯಲ್ಲಿ ಮುಳುಗಿ ಇಬ್ಬರು ಮೃತಪಟ್ಟ ಘಟನೆ ಶುಕ್ರವಾರ ಸಂಜೆ ನಡೆದಿದೆ. ಕಡವಿನಕಟ್ಟೆ ಕಂಡಕೋಡ್ಲು ವ್ಯಾಪ್ತಿಯ ಸೂರಜ್ ಪಾಂಡು ನಾಯ್ಕ (17) ಹಾಗೂ ಪಾರ್ವತಿ ಶಂಕರ ನಾಯ್ಕ (39) ಎಂಬುವರೇ ಮೃತರು. ಮೃತ ಪಾರ್ವತಿ ಅವರ ಮಗ ಗೆಳೆಯರೊಂದಿಗೆ ಈಜಾಡಲು ತೆರಳಿದ್ದನು. ಇದೇ ವೇಳೆ ಸೂರಜ್ ನೀರಿನ ಸೆಳತಕ್ಕೆ ಸಿಲುಕಿರುವುದನ್ನು ಕಂಡು ಆತನ ರಕ್ಷಣೆಗಾಗಿ ನೀರಿಗಿಳಿದ ಪಾರ್ವತಿ ಸಹ ಮುಳುಗಿದ್ದಾರೆ. ಭಟ್ಕಳ ಸರಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಶೌಚಾಲಯ ಕುಸಿದು ಮಹಿಳೆಯರಿಬ್ಬರ ಸಾವು

**ತಾವರಗೇರಾ (ಕೊಪ್ಪಳ):** ಪಟ್ಟಣದ ವಾರ್ಡ್ ನಂ.5ರ ಸಾರ್ವಜನಿಕ ಮಹಿಳಾ ಶೌಚಾಲಯದ ಚಾವಣಿ ಇದ್ದಕ್ಕಿಂತೆಯೇ ಕುಸಿದು ಬಿದ್ದು, ಮಹಿಳೆಯರಿಬ್ಬರು ಮೃತಪಟ್ಟ ಘಟನೆ, ಶುಕ್ರವಾರ ರಾತ್ರಿ ಜರುಗಿದೆ. ಬಾನುಬೇಗಂ(34) ಹಾಗೂ ಉಮಾ ಬಪ್ಪರಗಿ (45) ಮೃತರು. ಇದೇ ಘಟನೆಯಲ್ಲಿ ಐವರು ಗಾಯಗೊಂಡಿದ್ದು, ಪಟ್ಟಣದ ಸರಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಸಾರ್ವಜನಿಕ ಸಾಮೂಹಿಕ ಮಹಿಳಾ ಶೌಚಾಲಯದಲ್ಲಿ ಎಂದಿನಂತೆ ಮಹಿಳೆಯರು ಬಹಿರ್ದೆಸೆಗೆ ಹೋಗಿದ್ದರು. ಆದರೆ, ಇದ್ದಕ್ಕಿದ್ದಂತೆ ಶೌಚಾಲಯದ ಚಾವಣಿ ಕುಸಿದು ಅವಘಡ ಸಂಭವಿಸಿದೆ. ಕಟ್ಟಡದ ಅವಶೇಷದಡಿ ಸಿಲುಕಿದ್ದ ಮಹಿಳೆಯರನ್ನು ಪೊಲೀಸರು ಮತ್ತು ಸಾರ್ವಜನಿಕರ ಸಹಕಾರದಿಂದ ಹೊರ ತೆಗೆಯಲಾಗಿದೆ.

### ಸಿಡಿಲು ಬಡಿದು ವಿದ್ಯಾರ್ಥಿನಿ ಸಾವು

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಜಾಡರ ಅರಳಿಕಟ್ಟಿ ಗ್ರಾಮದಲ್ಲಿ ಸಿಡಿಲು ಬಡಿದು ಭಾಗ್ಯಶ್ರೀ ಪಡೆನ್ನವರ (16) ಎಂಬ ವಿದ್ಯಾರ್ಥಿನಿ ಮೃತ್ತಪಟ್ಟ ಘಟನೆ ಶುಕ್ರವಾರ ನಡೆದಿದೆ.

ಮಲ್ಲಾಪೂರ ಪಿಎಲ್ ಗ್ರಾಮದ ನಿವಾಸಿಯಾದ ಭಾಗ್ಯಶ್ರೀ ತಂದೆ ಜೊತೆ ಹೊಲಕ್ಕೆ ತೆರಳಿದ ವೇಳೆ ಸಿಡಿಲು ಬಡಿದು ಮೃತಪಟ್ಟಿದ್ದಾಳೆ ಎಂದು ಲೋಕಾಪುರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಮೃತ ವಿದ್ಯಾರ್ಥಿನಿ ಮನೆಗೆ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಭೇಟಿ ನೀಡಿ ಸಾಂತ್ವನ ಹೇಳಿದರು.

### ಮಾಯಕೊಂಡದಲ್ಲಿ ಹದವಾದ ಮಳೆ

ದಾವಣಗೆರೆ ಜಿಲ್ಲೆಯಲ್ಲಿ ಶುಕ್ರವಾರವೂ ಹಲವೆಡೆ ಮಳೆಯಾಗಿದೆ. ಬರದಿಂದ ಕಂಗೆಟ್ಟಿದ್ದ ಜನ, ರೈತರು ಖುಷಿಯಾಗಿದ್ದಾರೆ. ದಾವಣಗೆರೆ ನಗರದಲ್ಲಿ ಮಧ್ಯಾಹ್ನ ಗುಡುಗು, ಮಿಂಚಿನೊಂದಿಗೆ ತುಂತುರು ಮಳೆ ಸುರಿಯಿತು. ತಾಲೂಕಿನ ಮಾಯಕೊಂಡ ಹೋಬಳಿಯ ಬಾಡ, ಕಂದಗಲ್ಲು, ಮಳಲ್‌ಕೆರೆ, ರಾಮಗೊಂಡನಹಳ್ಳಿ, ಅತ್ತಿಗೆರೆ, ತೊಗಲೇರಿ ಭಾಗದಲ್ಲಿ ಸಂಜೆ ಅರ್ಧಗಂಟೆಗೂ ಹೆಚ್ಚು ಕಾಲ ಉತ್ತಮ ಮಳೆ ಸುರಿದಿದೆ. ಸಂಜೆ ಹೊನ್ನಾಳಿ ಪಟ್ಟಣ ಸೇರಿ ತಾಲೂಕಿನ ಹಲವೆಡೆ ತುಂತುರು ಮಳೆ ಸುರಿದಿದೆ. ಬೆಳಗುತ್ತಿಯಲ್ಲಿ 32.7 ಮಿ.ಮೀ. ಮಳೆ ದಾಖಲಾಗಿದೆ.

## ಮಳೆಗಾಗಿ ಸಮಾಧಿ ಕಿತ್ತು ಹೆಣ ಸುಟ್ಟರು!

**ಚಿಕ್ಕಮಗಳೂರು:** ಮಳೆಗಾಗಿ ಮೌಢ್ಯಕ್ಕೆ ಒಳಗಾದ ಜನರು ಹೂತ ಶವಗಳನ್ನು ತೆಗೆದು ರಾತ್ರೋರಾತ್ರಿ ಸುಟ್ಟ ಘಟನೆ ಜಿಲ್ಲೆಯಲ್ಲಿ ನಡೆದಿದೆ.

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲೂಕಿನ ಶಿವನಿ, ಜಲದಿಹಳ್ಳಿ, ಚಿಕ್ಕಾನವಂಗಲ, ತಿಮ್ಮಾಪುರ, ಬುಕ್ಕಾಂಬುಧಿ, ಚೀರನಹಳ್ಳಿ, ಕಾರೇಹಳ್ಳಿ, ದಂದೂರು, ಕಲ್ಲೇನಹಳ್ಳಿ, ಹರಳಹಳ್ಳಿ ನಾಗೇನಹಳ್ಳಿ ಜನರು ಕುಡಿಯುವ ನೀರಿಗೆ ಅಕ್ಷರಶಃ ಹಪಹಪಿಸುತ್ತಿದ್ದಾರೆ. ಆಡಕೆ ಬೆಳೆ ಉಳಿಸಿಕೊಳ್ಳಲು ಹಗಲೂ ರಾತ್ರಿ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದಾರೆ. ಮಳೆಗಾಗಿ ಮುಗಿಲು ನೋಡುತ್ತಿದ್ದ ಜನ, ಮೂಢನಂಬಿಕೆಯ ಮೊರೆ ಹೋಗಿ ಹೂತಿದ್ದ ಹೆಣಗಳನ್ನು ತೆಗೆದು ಸುಟ್ಟಿದ್ದಾರೆ.

**ರಾತ್ರಿ ಕಾರ್ಯಾಚರಣೆ:** ಮಳೆಗಾಗಿ ಪರಿತಪಿಸಿ ದೇವರ ಮೊರೆ ಹೋದ ಗ್ರಾಮಸ್ಥರಿಗೆ, ''ತೊನ್ನು ಹತ್ತಿದ್ದ ಮಹಿಳೆಯ ಮೃತದೇಹವನ್ನು ಹೂಳಲಾಗಿದೆ. ಅದನ್ನು ಹೊರ ತಗೆದು ಸುಡಬೇಕು'' ಎಂದು 'ದೇವರು' ಸೂಚಿಸಿದೆಯಂತೆ. ಈ ಸಂದೇಶ ಬರುತ್ತಿದ್ದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಚರ್ಚಿಸಿ ಶಿವನಿ ಗ್ರಾಮದಲ್ಲಿ ಕಳೆದ ಆರು ತಿಂಗಳ ಹಿಂದೆ ಮೃತಪಟ್ಟಿದ್ದ ಮಹಿಳೆಯ ಶವನ್ನು ಏಳು ಹಳ್ಳಿಯ ಸಾವಿರಾರು ಜನರು ಒಟ್ಟಾಗಿ ಗುರುವಾರ ಸಮಾಧಿಯಿಂದ ಹೊರತೆಗೆದು ಸುಟ್ಟು ಹಾಕಿದ್ದಾರೆ. ಕಾಕತಾಳೀಯ ಎಂಬಂತೆ ಗುರುವಾರ ಸಂಜೆ ಮಳೆಯಾಗಿದೆ. ಇನ್ನು ಕೆಲ ಗ್ರಾಮದಲ್ಲಿ ಇದೇ ಯೋಚನೆಗಳು ನಡೆಯುತ್ತಿವೆ.

ಹೀಗೆ ಮುಂದುವರಿದರೆ ಇದೊಂದು ರೀತಿಯ ಸಮೂಹ ಸನ್ನಿ ಆಗಬಹುದಾದ ಆತಂಕ ಕೆಲವರಲ್ಲಿ ಮನೆಮಾಡಿದೆ.

ಈ ವಿಚಾರಕ್ಕೆ ಸಂಬಂಧಿಸಿ ಒಬ್ಬರು ಪೊಲೀಸ್ ಠಾಣೆಯ ಮೊರೆ ಹೋಗಿದ್ದು, ಪೊಲೀಸರು ರಾಜಿ ಪಂಚಾಯಿತಿ ಮಾಡಿ ಕಳುಹಿಸಿದ್ದಾರೆ ಎಂದು ಹೆಸರು ಹೇಳಲಿಚ್ಛಿಸದ ಗ್ರಾಮದ ವ್ಯಕ್ತಿ ತಿಳಿಸಿದ್ದಾರೆ.

**ಆರು ಹೆಣಕ್ಕೆ ಬೆಂಕಿ**

ಜಲದಿಹಳ್ಳಿ ಗ್ರಾಮದಲ್ಲಿ ಹೂತಿದ್ದ ಆರು ಹೆಣಗಳನ್ನು ವಾರದ ಹಿಂದೆ ಒಂದೇ ರಾತ್ರಿ ತೆಗೆದು ಸುಟ್ಟು ಹಾಕಲಾಗಿದೆ. ಈ ಬಾರಿ ಬೇಸಿಗೆಯಲ್ಲಿ ಜಲ ಕಂಟಕ ಎದುರಿಸಿದ್ದ ಗ್ರಾಮಸ್ಥರು ಊರಿನ ದೇವರುಗಳ ಮೊರೆ ಹೋಗಿದ್ದರು. ''ತೊನ್ನು ಕಾಯಿಲೆಯಿಂದ ಮೃತಪಟ್ಟವರನ್ನು ಹೂತಿದ್ದಾರೆ. ತೆಗೆದು ಸುಡಬೇಕು'' ಎಂಬ ಬಗ್ಗೆ ದೇವರು ಅಪ್ಪಣೆ ನೀಡಿತ್ತು. ಕಳೆದ ವರ್ಷ ಗ್ರಾಮದಲ್ಲಿ ಮೃತಪಟ್ಟು ಹೂತಿದ್ದ ಹೆಣಗಳನ್ನು ಗ್ರಾಮಸ್ಥರು ಒಂದೇ ರಾತ್ರಿ ಕುಟುಂಬಸ್ಥರ ಅನುಮತಿ ಪಡೆದು ಹೊರತೆಗೆದು ಸುಟ್ಟು ಹಾಕಿದ್ದಾರೆ.

ಸೆನ್ಸೆಕ್ಸ್ 73,917.03 ↑ 253.31
ನಿಫ್ಟಿ 22,466.10 ↑ 62.25
ಬೆಳ್ಳಿ (1 ಕೆ.ಜಿ) ಬೆಂಗಳೂರು ₹ 88,500
ಯುಎಸ್ $ 83.48
ಪೆಟ್ರೋಲ್ ₹ 99.84
ಡೀಸೆಲ್ ₹ 85.93

## ದೇವರ ದರ್ಶನಕ್ಕೆ ತೆರಳಿದ್ದ ಮೂವರ ದುರ್ಮರಣ

■ **ವಿಕ ಸುದ್ದಿಲೋಕ** ಕೊಪ್ಪಳ

ತಾಲೂಕಿನ ಹುಲಿಗಿ ಹುಲಿಗೆಮ್ಮ ದೇವರ ದರ್ಶನಕ್ಕೆ ಹೋಗಿದ್ದ ಮೂವರು, ಶುಕ್ರವಾರ ರಾತ್ರಿ ನಡೆದ ಭೀಕರ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಯಲಬರ್ಗಾ ತಾಲೂಕಿನ ಕರಮುಡಿ ಗ್ರಾಮದ ಬಸವರಾಜ (22), ಮುತ್ತಪ್ಪ (22) ಹಾಗೂ ಗದಗ ಜಿಲ್ಲೆ ತಿಮ್ಮಾಪುರ ಗ್ರಾಮದ ಕೊಂಡಪ್ಪ (60) ಮೃತರು. ಇದೇ ಘಟನೆಯಲ್ಲಿ 15ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿದ್ದು, ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ದೇವರ ಹರಕೆ ತೀರಿಸಿದ ನಂತರ ಇವರು ಹುಲಿಗಿಯಿಂದ ತಮ್ಮೂರಿಗೆ ಟ್ರ್ಯಾಕ್ಟರ್‌ನಲ್ಲಿ ಮರಳುತ್ತಿದ್ದರು. ಈ ವೇಳೆ ಹೊಸಳ್ಳಿ ಬಳಿಯ ಹೆದ್ದಾರಿಯಲ್ಲಿ ಟ್ರ್ಯಾಕ್ಟರ್‌ಗೆ ಖಾಸಗಿ ಬಸ್ ಹಿಂಬದಿಯಿಂದ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ. ಮುನಿರಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ರೈಲಿನಿಂದ ಜಿಗಿದು ತಪ್ಪಿಸಿಕೊಳ್ಳಲು ಯತ್ನಿಸಿದಾಗ ಗಾಯ | ಹುಬ್ಬಳ್ಳಿ ಕಿಮ್ಸ್‌ಗೆ ದಾಖಲು

# ಅಂಜಲಿ ಹತ್ಯೆಗೈದ ಆರೋಪಿ ದಾವಣಗೆರೆಯಲ್ಲಿ ಸೆರೆ

■ **ವಿಕ ಸುದ್ದಿಲೋಕ** ದಾವಣಗೆರೆ/ಹುಬ್ಬಳ್ಳಿ

ಪ್ರೀತಿ ನಿರಾಕರಿಸಿದ ಕಾರಣಕ್ಕೆ ಹುಬ್ಬಳ್ಳಿಯ ಯುವತಿ ಅಂಜಲಿ ಅಂಬಿಗೇರ ಹತ್ಯೆ ಮಾಡಿ ತಲೆಮರೆಸಿಕೊಂಡ್ಡಿದ್ದ ಆರೋಪಿ ವಿಶ್ವನಾಥ ಅಲಿಯಾಸ್ ಗಿರೀಶ ಸಾವಂತನನ್ನು, ದಾವಣಗೆರೆಯಲ್ಲಿ ಗುರುವಾರ ತಡರಾತ್ರಿ ಸಿನಿಮೀಯ ರೀತಿ ಬಂಧಿಸಲಾಗಿದೆ. ಗಾಯಗೊಂಡ ಆರೋಪಿಗೆ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಆರೋಪಿ ವಿರುದ್ಧ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗದಗ ಜಿಲ್ಲೆಯ ಮುಳಗುಂದ ನಿವಾಸಿ ಲಕ್ಷ್ಮೀ ಅವರ ಹತ್ಯೆಗೆ ಯತ್ನಿಸಿದ ಹಾಗೂ ಅವರನ್ನು ಕಾಮುಕ ದೃಷ್ಟಿಯಿಂದ ನೋಡಿದ ಎಂಬ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

**ಮಹಿಳೆಗೆ ಇರಿದ ಆರೋಪಿ:** ಆರೋಪಿ ಮೈಸೂರಿನಿಂದ ವಿಶ್ವಮಾನವ ಎಕ್ಸ್‌ಪ್ರೆಸ್ ರೈಲಿನಲ್ಲಿ ಹುಬ್ಬಳ್ಳಿಗೆ ಗುರುವಾರ ಪಯಣಿಸುತ್ತಿದ್ದ. ತುಮಕೂರು ರೈಲು ನಿಲ್ದಾಣದಲ್ಲಿ ಇದೇ ರೈಲಿಗೆ ಗದಗ ಜಿಲ್ಲೆಯ ಮುಳಗುಂದ ಮೂಲದ ಲಕ್ಷ್ಮೀ ಕುಟುಂಬದ ಸದಸ್ಯರು ಹತ್ತಿದರು. ರೈಲು ಸಾಸಲು ಬಳಿಯಿದ್ದಾಗ ಲಕ್ಷ್ಮಿ ಶೌಚಾಲಯಕ್ಕೆ ಹೋಗಿದ್ದರು. ಆಕೆಯನ್ನು ಹಿಂಬಾಲಿಸಿದ ಆರೋಪಿ ಶೌಚಾಲಯದ ಬಾಗಿಲು ತಟ್ಟಿದ, ಹೊರ ಬಂದ ಲಕ್ಷ್ಮೀ ಆರೋಪಿಯನ್ನು ತರಾಟೆಗೆ ತೆಗೆದುಕೊಂಡರು. ಇದರಿಂದ ಸಿಟ್ಟಿಗೆದ್ದ ಗಿರೀಶ, ಆಕೆಗೆ ಚಾಕುವಿನಿಂದ ಇರಿದ. ತೀವ್ರ ಗಾಯಗೊಂಡ ಮಹಿಳೆ ಜೋರಾಗಿ ಕಿರುಚಿಕೊಂಡಾಗ ಆಕೆಯ ಪತಿ ಹಾಗೂ ಸಹ ಪ್ರಯಾಣಿಕರು ಸೇರುತ್ತಿದ್ದಂತೆಯೇ ಮಾಯಕೊಂಡ ಸಮೀಪದ ಬಂಡೆ ಬೊಮ್ಮನಹಳ್ಳಿಯ ಬಳಿ ಆರೋಪಿ ರೈಲಿನಿಂದ ಜಿಗಿದ. ಇದರಿಂದ ಗಾಯಗೊಂಡ ಗಿರೀಶನನ್ನು ಗ್ರಾಮಸ್ಥರು 108 ಆಂಬ್ಯುಲೆನ್ಸ್ ಮೂಲಕ ದಾವಣಗೆರೆಯ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಕಳುಹಿಸಿದರು.

ಚಾಕು ಇರಿತದಿಂದ ಗಾಯಗೊಂಡ ಲಕ್ಷ್ಮೀ ಅವರಿಗೆ ಬೋಗಿಯಲ್ಲೇ ಪ್ರಥಮ ಚಿಕಿತ್ಸೆ ನೀಡಲಾಯಿತು. ನಂತರ ಅವರು ದಾವಣಗೆರೆ ನಿಲ್ದಾಣದಲ್ಲಿ ಇಳಿದು, ಚಿಗಟೇರಿ ಆಸ್ಪತ್ರೆಗೆ ಬಂದರು.

ಆಗ ಆರೋಪಿಯನ್ನು ಕಂಡು, ತನಗೆ ಚಾಕು ಇರಿದಿದ್ದು ಈ ವ್ಯಕ್ತಿಯೇ ಎಂದು ತೋರಿಸಿದ್ದಾರೆ. ಆಸ್ಪತ್ರೆಯ ಉಪ ಠಾಣೆ ಪೊಲೀಸರು ನೀಡಿದ ಮಾಹಿತಿಯಂತೆ ಆಸ್ಪತ್ರೆಗೆ ದಾವಣಗೆರೆ ರೈಲ್ವೆ ಠಾಣೆ ಪೊಲೀಸರು ಆಗಮಿಸಿ, ಇಬ್ಬರಿಂದ ಹೇಳಿಕೆ ಪಡೆದು ವಾಪಸ್ ಹೋದರು. ಇಷ್ಟಾದರೂ ಗಿರೀಶ ಅಂಜಲಿಯನ್ನು ಹತ್ಯೆಗೈದ ಆರೋಪಿ ಎಂಬುದು ಯಾರಿಗೂ ತಿಳಿದಿರಲಿಲ್ಲ.

**ಫೋಟೊದಿಂದ ಪತ್ತೆ:** ಆಸ್ಪತ್ರೆಯಲ್ಲಿ ಇರಿತಕ್ಕೆ ಒಳಗಾದ ಮಹಿಳೆ ಮತ್ತು ಆರೋಪಿಯ ಹೇಳಿಕೆ ಪಡೆದಿದ್ದ ಎಎಸ್‌ಐ ನಾಗರಾಜ್ ಮೊಬೈಲ್ ನೋಡುತ್ತಿದ್ದಾಗ ಅಂಜಲಿ ಹತ್ಯೆ ಆರೋಪಿಯ ಫೋಟೊವನ್ನು ಕಂಡರು. ತಾವು ಈಗತಾನೆ ಹೇಳಿಕೆ ಪಡೆದಿರುವ ವ್ಯಕ್ತಿಯೇ ಅಂಜಲಿ ಕೊಲೆ ಆರೋಪಿ ಎಂದು ತಿಳಿದ ಕೂಡಲೇ ಆಸ್ಪತ್ರೆಗೆ ಹೋಗಿ ಆತನ ಪೂರ್ವಪರ ವಿಚಾರಿಸಿದರು. ಆತನ ಫೋಟೊಗಳನ್ನು ಹುಬ್ಬಳ್ಳಿ ಪೊಲೀಸರಿಗೆ ಕಳುಹಿಸಿ ಖಚಿತ ಪಡಿಸಿಕೊಂಡರು. ಮಧ್ಯರಾತ್ರಿ 12ರ ಸುಮಾರಿಗೆ ತನನ್ನು ಬಂಧಿಸಿದರು. ಬಳಿಕ ಹುಬ್ಬಳ್ಳಿಯ ಎಸಿಪಿ ಬಸವರಾಜ್ ನೇತೃತ್ವದ ಪೊಲೀಸರ ತಂಡ ದಾವಣಗೆರೆಗೆ ಆಗಮಿಸಿ, ಆರೋಪಿಯನ್ನು ಹುಬ್ಬಳ್ಳಿಗೆ ಕರೆದೊಯಿತು.

## ಹುಬ್ಬಳ್ಳಿಗೆ ಕರೆ ತಂದ ಪೊಲೀಸರು

**ಹುಬ್ಬಳ್ಳಿ:** ದಾವಣಗೆರೆಯಲ್ಲಿ ಬಂಧಿತನಾದ ಅಂಜಲಿ ಅಂಬಿಗೇರ ಹತ್ಯೆ ಆರೋಪಿ ಗಿರೀಶನನ್ನು ಶುಕ್ರವಾರ ಬೆಳಗ್ಗೆ ಹುಬ್ಬಳ್ಳಿಗೆ ಕರೆತರಲಾಗಿದ್ದು, ಆತ ತೀವ್ರ ಗಾಯಗೊಂಡ ಹಿನ್ನೆಲೆಯಲ್ಲಿ ಕಿಮ್ಸ್‌ಗೆ ದಾಖಲಿಸಲಾಗಿದೆ.

ಗಿರೀಶನ ತಲೆ ಹಾಗೂ ಮುಖದ ಭಾಗಕ್ಕೆ ತೀವ್ರ ಗಾಯವಾಗಿದ್ದರಿಂದ ಚಿಕಿತ್ಸೆ ನೀಡಲಾಗುತ್ತಿದೆ.

ಆರೋಪಿ ಬಂಧನ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್, ''ಆರೋಪಿ ರೈಲಿನಿಂದ ಬಿದ್ದ ಕಾರಣ ತಲೆ ಮತ್ತು ಮುಖಕ್ಕೆ ಗಂಭೀರ ಗಾಯಗಳಾಗಿವೆ. ವೈದ್ಯರು ಅವನ ಆರೋಗ್ಯ ಸುಧಾರಣೆ ಕುರಿತು ವರದಿ ನೀಡಿದ ಬಳಿಕ ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ನಂತರ ಪೊಲೀಸ್ ಕಸ್ಟಡಿಗೆ ಪಡೆದು ತನಿಖೆ ನಡೆಸಲಾಗುವುದು'' ಎಂದರು.

''ಅಂಜಲಿ ಹತ್ಯೆಗೈದು ಆರೋಪಿ ಮೈಸೂರಿಗೆ ಹೋಗಿದ್ದನು. ಅಲ್ಲಿಂದ ಮಹಾರಾಷ್ಟ್ರ ಅಥವಾ ಗೋವಾದಲ್ಲಿ ತಲೆಮರೆಸಿಕೊಳ್ಳಬೇಕು ಎಂದುಕೊಂಡು ಯೋಜನೆ ರೂಪಿಸಿರುವುದು ತಿಳಿದು ಬಂದಿದೆ,'' ಎಂದರು.

''ಆರೋಪಿಯು ಅಂಜಲಿಯನ್ನು ಪ್ರೀತಿಸುತ್ತಿದ್ದು, ಅವಳು ಅವನ ನಂಬರ್ ಬ್ಲಾಕ್ ಮಾಡಿದ್ದಳು ಎನ್ನುವ ಮಾಹಿತಿಯಿದೆ. ಇಬ್ಬರ ಮೊಬೈಲ್ ನಂಬರ್‌ಗಳನ್ನು ಸಿಡಿಆರ್‌ನಲ್ಲಿ ಸಂಗ್ರಹಿಸಿ, ವೈಜ್ಞಾನಿಕ ತನಿಖೆ ಕೈಗೊಂಡು ಅಗತ್ಯ ಮಾಹಿತಿ ಸಂಗ್ರಹಿಸಲಾಗುವುದು,'' ಎಂದರು.

ಚಿಕಿತ್ಸೆ ಪಡೆಯುತ್ತಿರುವ ಆರೋಪಿ ಗಿರೀಶ ಸಾವಂತನನ್ನು ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ ವಿಚಾರಣೆ ನಡೆಸಿದರು.

### ಗಿರೀಶ ವಿಡಿಯೊ ವೈರಲ್

''ಹುಬ್ಬಳ್ಳಿಯಿಂದ ಮೈಸೂರಿಗೆ ಹೋಗಿದ್ದೆ. ಅಲ್ಲಿಂದ ವಾಪಸ್ ರೈಲಿನಲ್ಲಿ ಬರುತ್ತಿದ್ದೆ. ಮಲಗಿಕೊಳ್ಳುವ ವಿಚಾರಕ್ಕೆ ಗಲಾಟೆ ನಡೆಯಿತು. ಈ ವೇಳೆ ಹಲ್ಲೆ ನಡೆದು ರೈಲಿನಿಂದ ಹೊರಬಿದ್ದೆ. ತಲೆಗೆ ಪೆಟ್ಟಾದ ಕಾರಣ ಎಲ್ಲಿ ಬಿದ್ದಿದ್ದೇನೆ ಎಂಬುದು ಗೊತ್ತಾಗಲಿಲ್ಲ. ರೈಲಿನಲ್ಲಿ ಮಹಿಳೆಗೆ ಇರಿದಿಲ್ಲ,'' ಎಂದು ವೈದ್ಯರೆದುರು ಆರೋಪಿ ಗಿರೀಶ ಹೇಳಿಕೊಂಡಿದ್ದಾನೆ ಎನ್ನಲಾದ ವಿಡಿಯೊ ಈಗ ವೈರಲ್ ಆಗಿದೆ.

## ಮೈಸೂರಲ್ಲಿ ಸಪ್ಲೈಯರ್ ಆಗಿದ್ದ

**ಮೈಸೂರು:** ಹುಬ್ಬಳ್ಳಿಯ ಅಂಜಲಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತನಾಗಿರುವ ಆರೋಪಿ ಗಿರೀಶ ಮೈಸೂರಿನ ಮಹಾರಾಜ ಹೋಟೆಲ್‌ನಲ್ಲಿ ಸಪ್ಲೈಯರ್ ಆಗಿದ್ದ. 4 ತಿಂಗಳ ಹಿಂದೆ ವಿನಾಯಕ ನರ್ಸಿಂಗ್ ಕೇರ್ ಏಜೆನ್ಸಿ ಮೂಲಕ ಈ ಹೋಟೆಲ್‌ಗೆ ಸೇರಿದ್ದ ಗಿರೀಶ್‌ನನ್ನು ಮೊದಲಿಗೆ ಹೋಟೆಲ್ ಮಾಲೀಕ ಗೋವರ್ಧನ್ ತಮ್ಮ ತಂದೆಯನ್ನು ನೋಡಿಕೊಳ್ಳಲು ನೇಮಿಸಿಕೊಂಡಿದ್ದರು. ''ಹೋಟೆಲ್‌ನಲ್ಲಿ ರೂಂ ಬಾಯ್, ಸಪ್ಲೈಯರ್ ಆಗಿದ್ದ ಗಿರೀಶ ಸರಿಯಾಗಿ ಕೆಲಸಕ್ಕೆ ಬರುತ್ತಿರಲಿಲ್ಲ,

ಕಳೆದ ಮಂಗಳವಾರ ಸಂಜೆ 5 ಸಾವಿ